
ಗಾಂಧೀಜಿ ಸರಳವಾಗಿ ಹೀಗೆ ವಿವರಿಸಿಕೊಂಡರು:

1. ಒಬ್ಬ ವ್ಯಕ್ತಿಯ ಒಳಿತು ಎಲ್ಲರ ಒಳಿತಿನಲ್ಲಿ ಅಡಗಿದೆ.
2. ಒಬ್ಬ ಲಾಯರ್ ಮಾಡುವ ಕೆಲಸಕ್ಕೂ, ಒಬ್ಬ ಕ್ಷೌರಿಕ ಮಾಡುವ ಕೆಲಸಕ್ಕೂ ಒಂದೇ ಮೌಲ್ಯವಿದೆ; ಯಾಕೆಂದರೆ, ಎಲ್ಲರಿಗೂ ತಾವು ಮಾಡುವ ಕೆಲಸದ ಮೂಲಕ ತಂತಮ್ಮ ಜೀವನ ನಿರ್ವಹಣೆ ಮಾಡುವ ಹಕ್ಕು ಇದೆ.
3. ಶ್ರಮದ ಜೀವನ, ಅಂದರೆ ನೆಲ ಉಳುವ ರೈತರ ಜೀವನ, ಹಾಗೂ ಕೈ ಬಳಸಿ ಕೆಲಸ ಮಾಡುವ ಕರಕುಶಲಿಗರ ಜೀವನ ನಿಜಕ್ಕೂ ಸಾರ್ಥಕ ಜೀವನ.



ಇಪ್ಪತ್ನಾಲ್ಕು ಗಂಟೆಗಳ ಪಯಣ ಮುಗಿಸಿ ಡರ್ಬಾನ್ ತಲುಪಿದ ಗಾಂಧೀಜಿ ಈ ಮೂರೂ ಗ್ರಹಿಕೆಗಳನ್ನು ಕಾರ್ಯರೂಪಕ್ಕಿಳಿಸುವ ಕೆಲಸ ಶುರು ಮಾಡಿಬಿಟ್ಟರು. ಪತ್ರಿಕೆಯ ಕಚೇರಿಯನ್ನು ನಗರದಿಂದ ಗ್ರಾಮೀಣ ಪರಿಸರದ ಫೀನಿಕ್ಸ್ ವಸತಿ ಪ್ರದೇಶಕ್ಕೆ ಒಯ್ಯುವ ಯೋಜನೆ ತಯಾರಾಯಿತು. ಬೋಯರ್ ಅಂತರ್ಯುದ್ಧದ ಕಾಲದಲ್ಲಿ ತಮ್ಮ ಪರವಾಗಿ ನಿಂತಿದ್ದ ಗಾಂಧೀಜಿಗೆ ಈಗ ನೆರವಾಗಲು ಅಲ್ಲಿನ ಭಾರತೀಯ ಬಡಗಿಗಳು ಬಂದರು. ಶೆಡ್ ತಯಾರಾಯಿತು. ಪತ್ರಿಕೆಯಲ್ಲಿ ಕೆಲಸ ಮಾಡುವ ಎಲ್ಲರಿಗೂ ಮೂರು ಪೌಂಡ್ ಸಂಬಳ. ಉದ್ಯೋಗಿಗಳೆಲ್ಲರೂ ಸುತ್ತಲಿನ ತೋಟದಲ್ಲಿ ಕೃಷಿಯಲ್ಲಿ ತೊಡಗುವರು; ಪತ್ರಿಕೆಯಲ್ಲೂ ಕೆಲಸ ಮಾಡುವರು. ಇದು ಗಾಂಧೀ ಸಮಾಜವಾದ!

ಫೀನಿಕ್ಸ್‌ನಲ್ಲಿ ನೆಲೆಗೊಂಡ ಪತ್ರಿಕೆ ದಕ್ಷಿಣ ಆಫ್ರಿಕಾದ ಭಾರತೀಯರ ಕಷ್ಟಗಳನ್ನು, ಅಭಿಪ್ರಾಯಗಳನ್ನು ಪ್ರಕಟಿಸತೊಡಗಿತು. ಲಿಂಕನ್, ಥೋರೋ ಥರದ ಆದರ್ಶ ವ್ಯಕ್ತಿಗಳನ್ನು, ಜಗತ್ತಿನ ಜನತಾ ಹೋರಾಟಗಳನ್ನು ಗಾಂಧೀಜಿ ಪರಿಚಯಿಸತೊಡಗಿದರು. ಸರ್ಕಾರದ ಕಾನೂನುಗಳ ದೋಷಗಳನ್ನು ಚರ್ಚಿಸಿದರು. ಭಾರತೀಯರ ತಪ್ಪುಗಳನ್ನೂ ಎತ್ತಿ ತೋರಿಸಿದರು. ದಕ್ಷಿಣ ಆಫ್ರಿಕಾದ ಭಾರತೀಯ ಸಮುದಾಯ 'ಇಂಡಿಯನ್ ಒಪೀನಿಯನ್' ಪತ್ರಿಕೆಯನ್ನು ತನ್ನದಾಗಿಸಿಕೊಂಡಿತು; ಅಲ್ಲಿನ ಶೇಕಡ ಹತ್ತರಷ್ಟು ಭಾರತೀಯರು ಪತ್ರಿಕೆಯ ಚಂದಾದಾರರಾದರು. ಗುಜರಾತಿ, ಹಿಂದಿ ಭಾಷೆಯ 'ಇಂಡಿಯನ್ ಒಪೀನಿಯನ್' ಸಂಚಿಕೆಗಳು ಭಾರತವನ್ನೂ ತಲುಪಿದವು.

ಆದರೂ 'ಇಂಡಿಯನ್ ಒಪೀನಿಯನ್'ನ ಕಷ್ಟ ಸುಖಗಳು ಎಲ್ಲ ಸ್ವತಂತ್ರ ಪತ್ರಿಕೆಗಳಂತೆಯೇ ಇದ್ದವು. ಒಂದು ವರ್ಷದ ಹೊತ್ತಿಗೆ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಸಮುದಾಯದ ದನಿ ಸ್ಪಷ್ಟವಾಗಿ ಕೇಳುವಂತೆ ಮಾಡಿದ್ದ ಪತ್ರಿಕೆ ಹಾಗೂ ಮುದ್ರಣಾಲಯದ ಹೊಣೆ ಗಾಂಧೀಜಿಯ ಹೆಗಲೇರಿತು. ಮೊದಲ ವರ್ಷ ಮುಗಿಯುವ ಹೊತ್ತಿಗೆ 2,000 ಪೌಂಡುಗಳಷ್ಟು ಗಾಂಧೀಜಿಯ ಸ್ವಂತ ಹಣ ಖರ್ಚಾಗಿತ್ತು. ಲಾಯರ್ ವೃತ್ತಿಯಲ್ಲಿ ಗಳಿಸಿದ ಹಣವನ್ನು ಸಾರ್ವಜನಿಕ ಕೆಲಸಕ್ಕೆ ಬಳಸಲು ಅವರು ಮುಂದಾದರು. ಆದರೆ, ಪತ್ರಿಕೆಯ ಸ್ಥಿತಿ ಹೀಗೇ ಮುಂದುವರಿದರೆ ಕಷ್ಟವೆಂಬುದು ಗೊತ್ತಾಗತೊಡಗಿತು. ಪತ್ರಿಕೆಯನ್ನು ಇನ್ನಷ್ಟು ವ್ಯವಸ್ಥಿತಗೊಳಿಸಬೇಕಾಗಿತ್ತು. ಹೊಸ ಸಂಪಾದಕ ಮನುಷ್ಯಲಾಲ್ ನಝರ್ ಭಾರತದಿಂದ ಬಂದರು. ಚಂದಾ ಸಂಗ್ರಹಿಸುವ ಕೆಲಸ ಮುಂದುವರಿಯಿತು.